ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು

PAPER CLIPPINGS

ಇಲಾಖೆ / ವಿಷಯ: DEPARTMENT / SUBJECT: ಸಾರಿಗೆ ಸಂಪರ್ಕ

ಪತ್ರಿಕೆಯ ಹೆಸರು : NAME OF THE NEWS PAPER : ಕನ್ನಡ ಪ್ರಭ     ದಿನಾಂಕ : DATE : 25/06/2019

# ಭಾರೀ ದಂಡದ ಮೋಟಾರು ಮಸೂದೆಗೆ ಸಂಪುಟ ಅಂಕಿತ

ಕ.ಪ್ರ 25/6/19

## ಮೋಟಾರ್ ವಾಹನ ತಿದ್ದುಪಡಿ ಮಸೂದೆಗೆ ಕೇಂದ್ರದ ಅನುಮತಿ | ಶೀಘ್ರ ಸಂಸತ್ತಿನಲ್ಲಿ ಮಂಡನೆಗೆ ನಿರ್ಧಾರ

ನವದೆಹಲಿ: ಚಾಲನಾ ಪರವಾನಗಿ ರದ್ದಾಗಿದ್ದರೂ ವಾಹನ ಓಡಿಸಿದರೆ ಮತ್ತು ತುರ್ತು ವಾಹನಗಳಿಗೆ ದಾರಿ ಬಿಡದೇ ಇದ್ದರೆ 10 ಸಾವಿರ ರು.ವರೆಗೂ ದಂಡ ಸೇರಿದಂತೆ ಸಾರಿಗೆ ನಿಯಮ ಉಲ್ಲಂಘನೆಗೆ ಭಾರೀ ದಂಡ ವಿಧಿಸುವ ಪ್ರಸ್ತಾವನೆ ಇರುವ ಮೋಟಾರು ವಾಹನ ತಿದ್ದುಪಡಿ ಕಾಯ್ದೆಗೆ ಕೇಂದ್ರ ಸಚಿವ ಸಂಪುಟ ಸೋಮವಾರ ಅನುಮೋದನೆ ನೀಡಿದೆ. ಹಾಲಿ ಸಂಸತ್ ಅಧಿವೇಶನದಲ್ಲೇ ಈ ಮಸೂದೆ ಮಂಡನೆ ಆಗುವ ಸಾಧ್ಯತೆ ಇದೆ.

**ಮಸೂದೆಯಲ್ಲಿ ಏನಿದೆ?:** ಆ್ಯಂಬುಲೆನ್ಸ್ ನಂತಹ ತುರ್ತು ವಾಹನಗಳಿಗೆ ದಾರಿ ಬಿಡದೇ ಇದ್ದರೆ 10 ಸಾವಿರ ರು., ವಾಹನ ಪರವಾನಗಿ ರದ್ದಾಗಿದ್ದರೂ ವಾಹನ ಚಲಾಯಿಸಿದರೆ 10 ಸಾವಿರ ರು. ದಂಡ ವಿಧಿಸಬಹುದಾಗಿದೆ. ಚಾಲನಾ ಪರವಾನಗಿ ಉಲ್ಲಂಘಿಸುವ ಸಂಸ್ಥೆ ಅಥವಾ ಕಂಪನಿಗಳಿಗೆ 1 ಲಕ್ಷ ರು. ವರೆಗೂ ದಂಡ ವಿಧಿಸಬಹುದಾಗಿದೆ. ಅತಿ ವೇಗದ ವಾಹನ ಚಾಲನೆಗೆ 1000ದಿಂದ 2000 ರು.ವರೆಗೂ ದಂಡ ವಿಧಿಸಬಹುದಾಗಿದೆ. ವಿಮೆ ಇಲ್ಲದೇ ವಾಹನ ಓಡಿಸಿದರೆ 2000 ರು.ವರೆಗೂ ದಂಡ, ಹೆಲ್ಮೆಟ್ ಇಲ್ಲದೇ ವಾಹನ ಓಡಿಸಿದರೆ 1000 ರು. ದಂಡ ಹಾಗೂ 3 ತಿಂಗಳು ಪರವಾನಗಿ ರದ್ದು ಮಾಡಬಹುದಾಗಿದೆ. ಅಪ್ರಾಪ್ತ ವಯಸ್ಸಿನವರು ವಾಹನ ಓಡಿಸಿ ರಸ್ತೆ ಅಪಘಾತ ಉಂಟಾದರೆ ವಾಹನ ಮಾಲೀಕರನ್ನು ತಪ್ಪಿತಸ್ಥ ಎಂದು ಪರಿಗಣಿಸಲಾಗುತ್ತದೆ. ಅಲ್ಲದೇ 25 ಸಾವಿರ ರು. ದಂಡ ಮತ್ತು ಮೂರು ವರ್ಷಗಳ ಜೈಲು ಶಿಕ್ಷೆ ವಿಧಿಸುವ ಪ್ರಸ್ತಾವನೆಯೂ ಮಸೂದೆಯಲ್ಲಿದೆ.